

ಕೆ.ಕೆ.ನಾಯರ್, ಕೆ.ವಿ.ಕುಮಾರನ್, ಮೋಹನ ಕುಂಟಾರ್ ಮತ್ತು ಕುಳಿತವರು ಎಂ.ಟಿ.

ಮಾನವೀಯತೆಯ ದೃಷ್ಟಿಯ ತಳಹದಿಯಲ್ಲಿ ಈ ಘಟನೆ 'ದುರ್ಬೀಜ' ಕಾದಂಬರಿಗೆ ವಸ್ತುವಾಯಿತು.

ಹುಚ್ಚ ವೇಲಾಯುಧನನ್ನು ಬಡಗುಮನೆಯ ಕೋಣೆಯಲ್ಲಿ ಸಂಕೋಲೆಯಲ್ಲಿ ಕಟ್ಟಿ ಹಾಕಿದ್ದು 'ಯಥಾರ್ಥ' ಕಥೆ. ತೆಕ್ಕೆಪಾಟ್ಟಿನ ವಾಸುದೇವನ್ ನಾಯರ್‌ಗೆ ಆತ ಸಂಬಂಧದಲ್ಲಿ ಅಣ್ಣನಾಗಬೇಕು. ವೇಲಾಯುಧಣ್ಣ ಹಸಿವೆಯಿಂದ ಅನ್ನ ಕೇಳಿಕೊಂಡು ಜಗಲಿಗೆ ಏರಿ ಬಂದಾಗ ಪುಟ್ಟ ಬಾಲಕ ಎಂ.ಟಿ. ದೀಪದ ಮುಂದೆ ಕುಳಿತು ನಾಮ ಜಪಿಸುತ್ತಿದ್ದನಂತೆ. ಮಾಳ್ವಕ್ಕ (ಎಂ.ಟಿ.ಯವರ ತಾಯಿ) ವೇಲಾಯುಧಣ್ಣನಿಗೆ ಪ್ರೀತಿಯಿಂದ ಊಟ ಕೊಡುತ್ತಿದ್ದುದನ್ನು ನೋಡಿದ ಎಂ.ಟಿ. ಮುಂದೆ 'ಇರುಳಿನ ಆತ್ಮ' ಎಂಬ ಅಸಾಮಾನ್ಯ ಕಥೆಯನ್ನು ಬರೆದರು. ಮನೋರೋಗಿಗಳನ್ನು ಅಗಾಧವಾದ ಪ್ರೀತಿಯಿಂದ, ಮಾನವೀಯತೆಯಿಂದ ಶುಶ್ರೂಷೆ ಮಾಡಬೇಕು ಎಂಬ ಸಂದೇಶವನ್ನು ನೀಡಿದರು. ಭಾರತೀಯ ಭಾಷೆಗಳಲ್ಲಿಯೇ ಈ ಕಥೆಗೆ ವಿಶಿಷ್ಟ ಸ್ಥಾನವಿದೆ.

ಹುಚ್ಚ ವೇಲಾಯುಧಣ್ಣನ ಕಾಲಿನ ಸಂಕೋಲೆ ತಾಗಿ ಹುಣ್ಣಾಗಿ ಕೀವು ಸ್ರವಿಸುವ ಕಥೆ ವೇಲಾಯುಧಣ್ಣನದು ಮಾತ್ರವೇ ಆಗಿರಲಿಲ್ಲ. ಹಳ್ಳಿಯಲ್ಲಿ ಮೂರೋ ನಾಲ್ಕೋ ಜನ ಹುಚ್ಚರಿದ್ದರಂತೆ. ಅವರ ಹುಚ್ಚಿನೊಡನೆ ಹಳ್ಳಿಯೂ, ಹಳ್ಳಿಯ ಬದುಕಿನೊಡನೆ ಹುಚ್ಚೂ ಸಾರ್ವಜನಿಕ ನಿಷ್ಕಳಂಕತೆಗೆ ಶ್ರುತಿ ಹಿಡಿದಿತ್ತು. ಅವರೇ ನೆನಪಿಸಿಕೊಂಡಂತೆ, 'ಉಗಿಬಂಡಿಯ ಎಂಜಿನುಗಳ ಶಬ್ದಕ್ಕೆ ಅದುರುತ್ತಿರುವ ಒಂದು ಹಳೆಯ ಮಹಡಿಯ ವರಾಂಡದಲ್ಲಿ ಕುಳಿತಿರುವಾಗ ಹುಚ್ಚ ವೇಲಾಯುಧಣ್ಣ ಚಿಕ್ಕಂದಿನಲ್ಲಿ ಮನೆಗೆ ಓಡಿ ಬಂದ ದೃಶ್ಯವನ್ನು ತಕ್ಷಣ ನೆನಪಿಸಿಕೊಂಡಾಗ ಆದ ಆಹ್ಲಾದವನ್ನು ನಾನೀಗಲೂ ಮೆಲುಕು ಹಾಕುವುದಿದೆ. ಬಡಗಣ ಮನೆಯಿಂದ ತಪ್ಪಿಸಿಕೊಂಡು ಬಂದು 'ಮಾಳ್ವಕ್ಕ ನನಗೆ ಒಂದಿಷ್ಟು ಅನ್ನ ಕೊಡಿ' ಎಂದು ಅಮ್ಮನಲ್ಲಿ ಹೇಳುತ್ತಾ ಕಾಲುದೀಪದ ಬೆಳಕಿರುವ ಜಗಲಿಗೆ ಬಂದ ದೃಶ್ಯ. ನನ್ನ ಕಥೆಗಳಿಗಿಂತಲೂ ನನಗೆ ಪ್ರಿಯವಾದದು ನನ್ನ ಕಥೆಗಳ ಕಥೆಗಳೇ'.

ಅವರೇ ಹೇಳುವಂತೆ 'ನನ್ನ ಸಾಹಿತ್ಯ ಜೀವನದಲ್ಲಿ ನಾನು ಹೆಚ್ಚು ಋಣಿಯಾಗಿರುವುದು ಕುಡಲೂರಿಗೆ. ವೇಲಾಯುಧಣ್ಣ, ಗೋವಿಂದ ಕುಟ್ಟಿಯಣ್ಣ, ಪಗಡೆ ಆಟಗಾರನಾದ ಕೊಂದುಣ್ಣಿ ಮಾವ, ಕಿವಿ ತುಂಡರಿಸಿದ ಮೀನಾಕ್ಷಿಅಕ್ಕ ಇವರೆಲ್ಲರ ಊರಾದ ಕುಡಲೂರಿಗೆ. ಅಪ್ಪ,